# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 73 | Pages. 2 | Date: 17-02-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 73 - ಪುಟಗಳು : 2 | 17-02-2026 | ಮಂಗಳವಾರ | Ph: 8762954248 | ದರ : ₹1


## ಉಸ್ತುವಾರಿ ಸಚಿವರ ದಿಢೀರ್ ಭೇಟಿ

### ಅಕ್ರಮ ಗಣಿಗಾರಿಕೆ ವಿರುದ್ಧ ಕಠಿಣ ಕ್ರಮಕ್ಕೆ ಸಚಿವರ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಇಂದು ಜಿಲ್ಲೆಯ ಚನ್ನರಾಯಪಟ್ಟಣ ಹಾಗೂ ಹೊಳೆನರಸೀಪುರ ತಾಲ್ಲೂಕುಗಳ ಆಸ್ಪತ್ರೆ, ಸರ್ಕಾರಿ ಕಚೇರಿಗಳು, ಶಾಲೆಗಳಿಗೆ ದಿಢೀರ್ ಭೇಟಿ ನೀಡಿ ವೈದ್ಯರು, ಸಿಬ್ಬಂದಿ, ಶಿಕ್ಷಕರ ಕಾರ್ಯವೈಖರಿ ಪರಿಶೀಲಿಸಿದರು. ಸ್ಥಳೀಯದಲ್ಲೇ ಸಾರ್ವಜನಿಕರ ಕುಂದು ಕೊರತೆ ಆಲಿಸಿ ಸಂಬಂಧಪಟ್ಟವರಿಗೆ ಸಲಹೆ ನೀಡಿದರು.

ಮೊದಲು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಯ ಪ್ರಯೋಗಾಲಯಕ್ಕೂ ತೆರಳಿ ಮಾಹಿತಿ ಸಂಗ್ರಹಿಸಿದರು.

ಅಲ್ಲಿಂದ ಡಯಾಲಿಸಿಸ್ ಚಿಕಿತ್ಸಾ ಕೇಂದ್ರಕ್ಕೆ ತೆರಳಿ ಪರಿಶೀಲಿಸಿದದ ಸಚಿವರು, ರೋಗಿಗಳಿಗೆ ಯಾವುದೇ ರೀತಿಯಲ್ಲೂ ತೊಂದರೆ ಆಗಬಾರದು



ಎಂದು ತಿಳಿಸಿದರು.

ಬಳಿಕ ಅಕ್ರಮ ಕಲ್ಲು ಗಣಿಗಾರಿಕೆಗೆ ಸಂಬಂಧಿಸಿ ಜನರಿಂದ ಅಹವಾಲು ಸ್ವೀಕರಿಸಿ ಸ್ಥಳದಲ್ಲೇ ಕಾನೂನು ಮೀರಿದವರ ವಿರುದ್ಧ ಕ್ರಮಕ್ಕೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರಿಗೆ ಸೂಚನೆ ನೀಡಿದರು.

ಇಲ್ಲಿಂದ ಹೊಳೆನರಸೀಪುರ ತಾಲೂಕು ಆಸ್ಪತ್ರೆಗೆ ತೆರಳಿ ಪರಿಶೀಲನೆ ನಡೆಸಿದರು. ಇದೇ ತಾಲೂಕಿನ ಮೂಡಲಹಿಪ್ಪೆ ಗ್ರಾಮ ಪಂಚಾಯಿತಿ ಕಾರ್ಯಾಲಯಕ್ಕೆ ತೆರಳಿ ಅಧಿಕಾರಿಗಳ ಕಾರ್ಯ ವೈಖರಿ ಪರಿಶೀಲಿಸಿ ಸಾರ್ವಜನಿಕರ ಕುಂದು ಕೊರತೆ ಆಲಿಸಿದರು.

ಹೊಳೆನರಸೀಪುರ ತಾಲೂಕು ತಟ್ಟೇಕೆರೆ ಬಾರೆ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶಾಲಾ ಮಕ್ಕಳ ಮಧ್ಯಾಹ್ನದ ಬಿಸಿಯೂಟ ಸೇವಿಸಿ ಗಮನ ಸೆಳೆದರು. ಬಳಿಕ ಶಾಲಾ ಮಕ್ಕಳು-ಶಿಕ್ಷಕರೊಂದಿಗೆ ಫೋಟೋ ತೆಗೆಸಿಕೊಂಡರು.



**ಶಾಲಾ ಮಕ್ಕಳ ಜೊತೆ ಬಿಸಿಯೂಟ ಸೇವಿಸಿದ ಸಚಿವರು**

ಸಚಿವರೊಂದಿಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಪಂ ಸಿಇಒ ಬಿ.ಆರ್.ಪೂರ್ಣಿಮಾ, ಚನ್ನರಾಯಪಟ್ಟಣದಲ್ಲಿ ಸ್ಥಳೀಯ ಶಾಸಕ ಸಿ.ಎನ್.ಬಾಲಕೃಷ್ಣ ಜೊತೆಗಿದ್ದರು.

## ಮಂತ್ರಿಗಾಗಿ ಹೋರಾಡೋಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಹಾಸನ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಅವಕಾಶ ಸಿಕ್ಕಾಗ ಸಚಿವ ಸ್ಥಾನದ ಆಸೆ ಹೊರ ಹಾಕುತ್ತಿದ್ದ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರೂ ಆಗಿರುವ ಶಾಸಕ ಕೆ.ಎಂ. ಶಿವಲಿಂಗೇಗೌಡ, ಇದೀಗ ಸಚಿವರಾಗುವ ಆಸೆಯನ್ನು ಮತ್ತೊಮ್ಮೆ ಬಹಿರಂಗವಾಗಿಯೇ ಹೇಳಿದ್ದಾರೆ.

ಅರಸೀಕೆರೆ ತಾಲ್ಲೂಕಿನ ಗಂಡಸಿ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದ ಮಹಾಶಿವರಾತ್ರಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಿಲ್ಲೆಯ ರಾಜಕಾರಣದಲ್ಲಿ ಸಕ್ರಿಯ ನಾಯಕತ್ವ ವಹಿಸುವ ಸಂಕಲ್ಪ ವ್ಯಕ್ತಪಡಿಸಿದರು.

ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಮುಖಂಡರೊಂದಿಗೆ ರಾಜಿ ಮಾಡಿಕೊಂಡು ಒಗ್ಗಟ್ಟಿನಿಂದ ಹೋರಾಟ ಮಾಡ್ತೇನೆ.

ಜಿಲ್ಲೆಯಲ್ಲಿ ಒಂದು ಶಕ್ತಿಯಾಗಿ ಬೆಳೆಯಲು ಹೊರಟಿದ್ದೆ, ಮಧ್ಯೆ ಸ್ವಲ್ಪ ಅಡಚಣೆ ಆಯಿತು. ಆದರೆ ಈ ಬಾರಿ ಇಡೀ ಜಿಲ್ಲೆಯ ಜನರು ಒಗ್ಗಟ್ಟಾಗಿ ಹೋಗಿ ಮಂತ್ರಿ ಮಾಡಲೇಬೇಕು ಎಂದು ಹಠ ಹಿಡಿದು ಕೇಳೋಣ ಎಂದು ಅವರು ಹೇಳಿದರು.

ಜಿಲ್ಲೆಯ ಉಳಿವು ಮತ್ತು ಪರಿಣಾಮಕಾರಿ ನಾಯಕತ್ವದ ಅಗತ್ಯ ಉಲ್ಲೇಖಿಸಿದ ಶಾಸಕ ಶಿವಲಿಂಗೇಗೌಡ, ಜಿಪಂ-ತಾಪಂ ಹಾಗೂ ಗ್ರಾಪಂ ಚುನಾವಣೆಗಳನ್ನು ತಮ್ಮ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸದೇ ಇಡೀ ಜಿಲ್ಲೆಯಲ್ಲಿ ಸಂಘಟನೆ ಬಲಪಡಿಸುವುದಾಗಿ ಘೋಷಿಸಿದರು.

ಈ ಜಿಲ್ಲೆಯ ರಾಜಕಾರಣ ಮಾಡಲೇಬೇಕೆಂದು ಹಠ



ತೊಟ್ಟಿದ್ದೇನೆ. ಈ ಜಿಲ್ಲೆಯ ರಾಜಕಾರಣಕ್ಕೆ ಒಳ್ಳೆಯ ಮೆರಗು ಕೊಡಲು ಹಾಗೂ ನಾಯಕತ್ವ ವಹಿಸಲು ಭಗವಂತ ಶಕ್ತಿ ಕೊಟ್ಟಿದ್ದಾನೆ. ಅರಸೀಕೆರೆ ಕ್ಷೇತ್ರದ ಜನರು ನಾಲ್ಕು ಬಾರಿ ಗೆಲ್ಲಿಸಿದ್ದಾರೆ. ಅದಕ್ಕೆ ಪ್ರತಿಫಲವಾಗಿ ಜಿಲ್ಲೆಯ ನಾಯಕತ್ವ ಹಿಡಿಯುತ್ತೇನೆ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದರು.

ಇನ್ನು ಮುಂದೆ ಹಿಂಜರಿಯದೇ ಹೋರಾಟ ನಡೆಸಿ ಪಕ್ಷ ಸಂಘಟನೆಗೆ ಒತ್ತು ನೀಡುವುದಾಗಿ ಹೇಳಿದ ಅವರು, ಮುಂದಿನ ಚುನಾವಣೆಯಲ್ಲಿ ಜಿಲ್ಲೆಯ ಮಟ್ಟದಲ್ಲಿ ಬಲಿಷ್ಠ ರಾಜಕೀಯ ರೂಪುರೇಷೆ ರೂಪಿಸುವುದಾಗಿ ಸ್ಪಷ್ಟಪಡಿಸಿದರು.

ಸಂಸದ ಶ್ರೇಯಸ್ ಪಟೇಲ್ ತಮ್ಮೊಂದಿಗೆ ಇರುವುದಾಗಿ ಹೇಳಿದ ಶಿವಲಿಂಗೇಗೌಡ, ಮುಂದಿನ ಚುನಾವಣೆಗೆ ಸಜ್ಜಾಗುವುದಾಗಿ ಘೋಷಿಸಿದರು. ಶಾಸಕರ ಈ ಬಹಿರಂಗ ಹೇಳಿಕೆ ಜಿಲ್ಲೆಯ ರಾಜಕೀಯ ವಲಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ.

## ಫೆ. 20 ಸರ್ಕಾರಿ ಶಿಕ್ಷಣ ಇಲಾಖೆ ಪದಾಧಿಕಾರಿಗಳ ಪದಗ್ರಹಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇದೇ ತಿಂಗಳ 22 ರಂದು ಬೆಳಿಗ್ಗೆ 10.30ಕ್ಕೆ ನಗರದ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ಜಿಲ್ಲಾ ಮಟ್ಟದ ಪದಾಧಿಕಾರಿಗಳ ಸಭೆ ಹಾಗೂ ಪದಗ್ರಹಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಡಿ. ರಮೇಶ್ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯ ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಕಾಲೇಜು, ಬೋಧಕೇತರ ಹಾಗೂ ಲಿಪಿಕ ವರ್ಗದ ನೌಕರರಿಗೆ ಉತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಶಿಕ್ಷಣ ಇಲಾಖೆಯ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಪರಿಶ್ರಮ ಗುರುತಿಸಿ ಗೌರವಿಸುವುದು ಸಂಘದ ಮುಖ್ಯ ಉದ್ದೇಶ ಎಂದು ತಿಳಿಸಿದರು.

1ನೇ ತರಗತಿಯಿಂದ ಪಿ.ಯು. ವರೆಗೆ ಕೆ.ಪಿ.ಎಸ್. ಮಾದರಿ ಒಂದೇ ಸಂಘಟನೆಯಡಿ ಎಲ್ಲ ವೃಂದಗಳನ್ನೂ ಒಗ್ಗೂಡಿಸುವ ಪ್ರಯತ್ನ ನಮ್ಮದಾಗಿದೆ. ಶಿಕ್ಷಣ ಇಲಾಖೆಯ ಎಲ್ಲಾ ವರ್ಗಗಳ



ನೌಕರರ ಸಾಮಾನ್ಯ ಹಿತಾಸಕ್ತಿ ರಕ್ಷಿಸಿ ಪ್ರೋತ್ಸಾಹಿಸುವುದು, ನೌಕರರ ನಡುವೆ ಬಾಂಧವ್ಯ ಬೆಳೆಸುವುದು ಮತ್ತು ಪರಸ್ಪರ ಸಹಕಾರದ ಮನೋಭಾವ ವೃದ್ಧಿಸುವುದು ಸಂಘದ ಪ್ರಮುಖ ಗುರಿ ಎಂದರು.

ನೌಕರರ ಸೇವಾ ವೇತನ, ನಿವೃತ್ತಿ ವೇತನ, ವಿವಿಧ ಭತ್ಯೆ ಹಾಗೂ ಭವಿಷ್ಯ ನಿಧಿ ಸುಧಾರಣೆಗಾಗಿ ಸಲಹೆ ನೀಡುವುದು ಮತ್ತು ಅಗತ್ಯ ಕ್ರಮ ಕೈಗೊಳ್ಳುವುದು ಸಂಘದ ಧ್ಯೇಯವಾಗಿದೆ.

ಜೊತೆಗೆ ಸಂಘದ ಕಾರ್ಯಚಟುವಟಿಕೆಗಳಿಗೆ ಅಗತ್ಯವಿರುವ ವಂತಿಕೆ, ದೇಣಿಗೆ ಸಂಗ್ರಹಿಸಿ ಸಮರ್ಪಕವಾಗಿ ಬಳಕೆ ಮಾಡುವ ವ್ಯವಸ್ಥೆ ಸಹ ಮಾಡಲಾಗಿದೆ ಎಂದು ಹೇಳಿದರು.

ಸಂಘದ ಸದಸ್ಯರಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತ ಹಾಗೂ ರಾಷ್ಟ್ರೀಯ ಚಿಂತನೆಗಳ ಅರಿವು ಮೂಡಿಸುವುದರೊಂದಿಗೆ ಸ್ವಸಹಾಯ, ಸ್ವಾವಲಂಬನೆ ಮತ್ತು ಸ್ವಾಭಿಮಾನ ಬಲಪಡಿಸಲು ಕಟಿಬದ್ಧವಾಗಿದೆ. ಸ್ಥಿರ ಮತ್ತು ಚರ ಆಸ್ತಿಗಳನ್ನು ಸಂಪಾದಿಸಿ ಸಮರ್ಪಕ ಆಡಳಿತ ವ್ಯವಸ್ಥೆ ನಿರ್ಮಿಸುವುದು ಹಾಗೂ ನೌಕರರ ಹಿತಾಸಕ್ತಿಗಾಗಿ ಪೂರಕ ಚಟುವಟಿಕೆ ನಡೆಸುವುದು ಸಂಘದ ಕಾರ್ಯಯೋಜನೆಯ ಭಾಗವಾಗಿದೆ ಎಂದು ವಿವರಿಸಿದರು.

ಸ್ವಜನ ಪಕ್ಷಪಾತ, ಕೋಮು ಭಾವನೆ, ಭ್ರಷ್ಟಾಚಾರ ಹಾಗೂ ಸಾಮಾಜಿಕ ಭೇದ-ಭಾವಗಳಿಂದ ದೂರವಿದ್ದು, ಸಾರ್ವಜನಿಕ ಸೇವೆಯಲ್ಲಿ ದಕ್ಷತೆ ಹೆಚ್ಚಿಸುವುದು ಮತ್ತು ಶಿಕ್ಷಣ ಇಲಾಖೆ ನೌಕರರ ಶ್ರೇಯೋಭಿವೃದ್ಧಿ ಸಾಧಿಸುವುದು ಸಂಘದ ಮುಖ್ಯ ಗುರಿ ಎಂದು ಹೇಳಿದರು.

ಇತ್ತೀಚೆಗೆ ಸ್ಥಾಪಿತವಾಗಿರುವ ಸಂಘಕ್ಕೆ ವರ್ಷ ತುಂಬಿದ್ದು, ಜಿಲ್ಲೆಯ 8 ತಾಲ್ಲೂಕುಗಳಲ್ಲಿ ಕೇವಲ 1 ತಿಂಗಳೊಳಗೆ ಸಂಘಟನೆ ಬಲಪಡಿಸಲಾಗಿದೆ. ಶಿಕ್ಷಣ ಇಲಾಖೆಯ ವಿವಿಧ ವಿಭಾಗಗಳನ್ನು ಒಂದೇ ಬ್ಯಾನರ್ ಅಡಿ ಒಗ್ಗೂಡಿಸುವ ಏಕೈಕ ಮತ್ತು ಪ್ರಥಮ ಸಂಘವೆಂಬ ಹೆಗ್ಗಳಿಕೆ ಪಡೆದಿದೆ. ಜಿಲ್ಲೆಯ ಎಲ್ಲಾ ನೌಕರರು ಸಂಘದ ಕಾರ್ಯವೈಖರಿ ಮತ್ತು ಚಟುವಟಿಕೆ ತಿಳಿದು ಸದಸ್ಯತ್ವ ಪಡೆಯುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ರಾಜ್ಯ ಪರಿಷತ್ತು ಸದಸ್ಯ ಎಸ್. ಎನ್. ಶಿವಕುಮಾರ್, ಜಿಲ್ಲಾ ಕಾರ್ಯದರ್ಶಿ ಎಂ.ಪಿ. ಶ್ರೀಕಾಂತ್, ವಿಭಾಗೀಯ ಕಾರ್ಯಾಧ್ಯಕ್ಷೆ ಎಸ್. ಎನ್. ಶುಭಮಂಗಳ, ಉಪಾಧ್ಯಕ್ಷ ರಾಘವೇಂದ್ರ, ದೇವರಾಜು, ರಘು, ಚನ್ನಕೇಶವ ಇದ್ದರು.

## ಪ್ರಧಾನಿಯಿಂದ ಮೆಗಾಡೇರಿ ಉದ್ಘಾಟನೆ

### ಶಿವರಾತ್ರಿಯಂದು ಹುಟ್ಟೂರಿನಲ್ಲಿ ಮನೆ ದೇವರ ಪೂಜಿಸಿದ ದೇವೇಗೌಡರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡರು ಮಹಾ ಶಿವರಾತ್ರಿ ಹಬ್ಬದ ಅಂಗವಾಗಿ ಹುಟ್ಟೂರು ಹರದನಹಳ್ಳಿಯ ಮನೆದೇವರು ಶ್ರೀ ದೇವೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಜೊತೆಯಲ್ಲಿ ಮಾಜಿ ಸಚಿವರು ಹಾಗೂ ಶಾಸಕರಾದ ಹೆಚ್.ಡಿ ರೇವಣ್ಣ, ಎ.ಮಂಜು, ಎಂಎಲ್‌ಸಿ ಡಾ.ಸೂರಜ್ ರೇವಣ್ಣ ಹಾಗೂ ಅಪಾರ ಸಂಖ್ಯೆಯ ಭಕ್ತಾದಿಗಳು ಇದ್ದರು.

ನಂತರ ಮಾತನಾಡಿದ ಗೌಡರು, ದೇಶದ ಜನತೆಗೆ ಒಳ್ಳೆಯದಾಗಲಿ, ಜನಗಳಿಗೆ ನೋವು, ಬಹಳ ಕಷ್ಟವಿದೆ. ನಿರುದ್ಯೋಗವಿದೆ,

ವಿದ್ಯಾವಂತರು ಕೆಲಸಕ್ಕಾಗಿ ಸುತ್ತುತ್ತಾರೆ ಎಂದು ಬೇಸರ ಹೊರ ಹಾಕಿದರು.

ರೇವಣ್ಣ ಅವರು ವಿದ್ಯಾಭ್ಯಾಸ, ಡೇರಿಗೆ ಮಹತ್ವ ಕೊಟ್ಟರು. ಜಿಲ್ಲೆ ಒಂದರಲ್ಲಿ ನಿತ್ಯ 12 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗುತ್ತದೆ. ಚಿಕ್ಕಮಗಳೂರಿನಿಂದ ಒಂದೂವರೆ



ಲಕ್ಷ ಲೀಟರ್, ಕೊಡಗಿನಿಂದ 30ಸಾವಿರ ಲೀಟರ್ ಹಾಲು ಬರುತ್ತದೆ. ಹೈನುಗಾರಿಕೆಯಿಂದ ಆರ್ಥಿಕವಾಗಿ ಸ್ವಲ್ಪಮಟ್ಟಿನ ಸುಧಾರಣೆ ಆಗುತ್ತದೆ ಎಂದರು.

ಆದರೆ ಇನ್ನೂ ನಿರುದ್ಯೋಗ ಇದೆ, ಕೆಲವರಿಗೆ ಭೂಮಿ ಇಲ್ಲ. ಹಾಸನ ಜಿಲ್ಲೆಗೆ ಐಐಟಿ ಬಿಟ್ಟರೆ ಎಲ್ಲಾ ರೀತಿಯ ಕಾಲೇಜು, ಕೋರ್ಸ್‌ಗಳನ್ನು ರೇವಣ್ಣ ತಂದಿದ್ದಾರೆ. ನಮ್ಮ ಅವಧಿ ಮುಗಿಯಿತು.

ನಾನು ಕುಳಿತು ಕೊಳ್ಳುವುದಿಲ್ಲ, ಭಗವಂತ ಜ್ಞಾಪಕ ಶಕ್ತಿ ಕೊಟ್ಟಿದ್ದಾನೆ. ಆ ಸನ್ನಿವೇಶಕ್ಕೆ ತಕ್ಕಂತೆ ನಮ್ಮ ಜನಗಳಿಗೆ ಉಪಯೋಗ ಮಾಡಬೇಕು.

ಹಾಸನದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಮೆಗಾ ಡೇರಿಯನ್ನು ಪ್ರಧಾನ ಮಂತ್ರಿ ಅವರೇ ಬಂದು ಉದ್ಘಾಟನೆ ಮಾಡ್ತಾರೆ. ಇದೀಗ ಮೆಗಾಡೇರಿಗೆ ಕೇಂದ್ರ ಸರ್ಕಾರ 150 ಕೋಟಿ ಕೊಟ್ಟಿದೆ, ಇದರಲ್ಲಿ ರಾಜ್ಯ ಸರ್ಕಾರದ್ದು ಏನೂ, ಈ ಮಹಾನುಭಾವರದ್ದು ಏನೂ ಇಲ್ಲ, ಇದ್ದಿದ್ದರೆ ಕೈಹಾಕಿ ತೊಂದರೆ ಕೊಡುತ್ತಿದ್ದರು ಎಂದು ದೂರಿದರು.

ಇವತ್ತು ಪುಣ್ಯ ದಿವಸ ಯಾರ ಬಗ್ಗೆಯೂ ಮಾತನಾಡುವುದು ಬೇಡ. ದೇವರು ಎಲ್ಲರಿಗೂ ಸದ್ಬುದ್ಧಿ ಕೊಡಲಿ. ಈ ದೇಶ ಪುಣ್ಯಭೂಮಿ ಎಂದು ನಂಬಿದ್ದೇವೆ, ನಮಗೆ ಆ ಪರಮಾತ್ಮ ಮಾರ್ಗದರ್ಶನ ಮಾಡಲಿ, ನೀರಾವರಿ ವಿಚಾರ ಇನ್ನೂ ಚರ್ಚೆ ಮಾಡುವುದು ಇದೆ, ನಮಗೆ ನೀರಾವರಿ ತೊಂದರೆ ಇದೆ. ನಮ್ಮ ಅವಧಿ ಇನ್ನೊಂದು ತಿಂಗಳು ಇರೋದಷ್ಟೇ. ಗೋದಾವರಿ ತಿರುವು ಯೋಜನೆಯಿಂದ ತೆಲಂಗಾಣಕ್ಕೆ 47 ಟಿಎಂಸಿ, ಆಂಧ್ರಪ್ರದೇಶ, ತಮಿಳುನಾಡಿಗೆ 46 ಟಿಎಂಸಿ ನೀರು ಕೊಡ್ತಾರೆ, ನಮ್ಮಿಂದ ಹೋಗುವ ನೀರು ಕಡಿಮೆ ಮಾಡಬೇಕು, ನಾವು ಮೇಲ್ಭಾಗದಲ್ಲಿದ್ದೇವೆ, ನಮ್ಮ ನೀರನ್ನೆಲ್ಲಾ ಬಸೀತಾರೆ. ಅಲ್ಲಿ ಬೆಳೆ ಒಣಗುತ್ತಿದೆ ಎಂದು ತಕರಾರು ಅರ್ಜಿ ಹಾಕ್ತಾರೆ, ಇದಕ್ಕೆ ನನ್ನ ಕೈಲಾದಷ್ಟು ಹೋರಾಟ ಮಾಡಿದ್ದೇನೆ. ನದಿ ನೀರು ಹಂಚಿಕೆಗೆ ಪ್ರಾಧಿಕಾರ ರಚನೆ ಮಾಡುವಂತೆ ಒತ್ತಾಯಿಸಿದ್ದೇನೆ, ಈ ಬಗ್ಗೆ ಪ್ರಧಾನಮಂತ್ರಿ ಅವರಿಗೂ ಹೇಳಿದ್ದೇನೆ, ಮಾಡಬಹುದು ನೋಡೋಣ ಎಂದರು.

## ಪ್ರಿಯಾಂಕ್‌ಖರ್ಗೆ ಹೇಳಿಕೆಗೆ ಮಂಜು ಖಂಡನೆ

### ಪಕ್ಷದ ವಿಚಾರದಲ್ಲಿ ಪ್ರೀತಂಗೌಡರ ಹೇಳಿಕೆ ಸರಿ : ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆರ್‌ಎಸ್‌ಎಸ್ ಸಂಘಟನೆಯಲ್ಲಿ ದೆವ್ವಕ್ಕೆ ಹೋಲಿಸಿ ಲಘುವಾಗಿ ಮಾತನಾಡಿರುವ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಯನ್ನು ಖಂಡಿಸಿದ ರಾಜ್ಯ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷರೂ ಆಗಿರುವ ಆಲೂರು-ಸಕಲೇಶಪುರ ಬಿಜೆಪಿ ಶಾಸಕ ಸಿಮೆಂಟ್ ಮಂಜು, ಅವರ ಹೇಳಿಕೆ ಮರು ಪರಿಶೀಲನೆ ಮಾಡಬೇಕು ಎಂದು ಒತ್ತಾಯಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅವರು ಜವಾಬ್ದಾರಿ ಸಚಿವರಾಗಿದ್ದಾರೆ. ಹಿರಿಯ ರಾಜಕೀಯ ಮುತ್ಸದ್ದಿ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರರಾಗಿದ್ದಾರೆ. ಮಾತನಾಡುವಾಗ ಜವಾಬ್ದಾರಿ ಅರಿವು ಮಾತನಾಡಬೇಕೆಂದರು.

1925 ರಲ್ಲಿ ಹುಟ್ಟಿದ ಆರ್‌ಎಸ್‌ಎಸ್ ರಾಷ್ಟ್ರಕ್ಕೆ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ನೆರವಾಗುತ್ತಿದೆ.




ಯಾವುದೇ ಗಲಭೆ ಮಾಡಿಸಿಲ್ಲ, ಪ್ರಕೃತಿ ವಿಕೋಪ ಇತ್ಯಾದಿ ಸಂದರ್ಭದಲ್ಲಿ ಸ್ವಯಂ ಸೇವೆ ಮಾಡುತ್ತಾ ಬರುತ್ತಿದೆ ಎಂದರು.

ಹಿಂದೆ ಮಹಾತ್ಮಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್, ನಂತರದಲ್ಲಿ ಕಾಂಗ್ರೆಸ್‌ನ ಪ್ರಣಬ್ ಮುಖರ್ಜಿ ಮೊದಲಾದವರು ಭೇಟಿ ನೀಡಿ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಭಾರತಾಂಬೆಯ ಘನತೆಯನ್ನು ಮತ್ತಷ್ಟು ವೃದ್ಧಿ ಮಾಡಲು ಆರ್‌ಎಸ್ ಶ್ರಮಿಸುತ್ತಿದೆ. ಇಂಥ ಸಂಘಟನೆ ಬಗ್ಗೆ ಮಾತನಾಡಿದರೆ ದೊಡ್ಡ ಸ್ಥಾನಮಾನ ಸಿಗಬಹುದು ಎಂದು ಮಾತನಾಡುತ್ತಿರಬಹುದು ಎಂದು ಕುಟುಕಿದರು.

ಇವರ ಅವಧಿಯಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗೆ ಕಡಿವಾಣ ಹಾಕಲು ಪ್ರಯತ್ನಿಸಿದರೂ, ಆದರೆ ನ್ಯಾಯಾಲಯ ನಮಗೆ ಅವಕಾಶ ನೀಡಿದೆ ಎಂದರು.

### ಮೈತ್ರಿ: ವರಿಷ್ಟರ ತೀರ್ಮಾನಕ್ಕೆ ಬದ್ಧ

**ಮಾಜಿ ಶಾಸಕ ಪ್ರೀತಂಗೌಡ ಅವರು ಪಾರ್ಟಿಯ ಪರವಾಗಿ, ಪಕ್ಷದ ಹಿತಕ್ಕಾಗಿ ಹೇಳಿಕೆ ನೀಡಿದ್ದಾರೆ. 2028ಕ್ಕೆ ನಮ್ಮ ಪಕ್ಷವೇ ಅಧಿಕಾರಕ್ಕೆ ಅಧಿಕಾರಕ್ಕೆ ಬರಬೇಕು, ನಮ್ಮವರೇ ಸಿಎಂ ಆಗಬೇಕು ಎಂಬ ಕಟ್ಟಕಡೆಯ ಕಾರ್ಯಕರ್ತರ ಆಸೆ, ಮನಸ್ಸಿನ ಭಾವನೆಯನ್ನು ಅವರು ಹೇಳಿದ್ದಾರೆ ಎಂದು ಸಮರ್ಥಿಸಿಕೊಂಡರು.**

**37 ವರ್ಷಕ್ಕೇ ಶಾಸಕರಾಗಿ ನಗರ ಹಾಗೂ ಜಿಲ್ಲೆ ಮೆಚ್ಚುವ, ನೆನಪಲ್ಲಿ ಉಳಿಯುವ ಕೆಲಸ ಮಾಡಿದ್ದಾರೆ. ನಮ್ಮ ನಾಯಕರ ಬಗ್ಗೆ ಯಾರೂ ಅನವಶ್ಯಕವಾಗಿ ಮಾತನಾಡಬಾರದು.**

**ಆದರೆ ಮೈತ್ರಿ ವಿಚಾರದಲ್ಲಿ ನಮ್ಮ ನಾಯಕರು ಕೈಗೊಳ್ಳುವ ತೀರ್ಮಾನಕ್ಕೆ ನಾವೆಲ್ಲರೂ ಬದ್ಧ ಎಂದು ನುಡಿದರು. ಈಗಲೂ ನಾನಾದಿಯಾಗಿ ಬಿಜೆಪಿಯ ಎಲ್ಲರೂ ಪಕ್ಷದ ಪರವಾಗಿಯೇ ಮಾತನಾಡುತ್ತೇವೆ. ಹೊಂದಾಣಿಕೆ ವಿಚಾರದಲ್ಲಿ ಪಾರ್ಟಿ ಹೇಳುವುದನ್ನು ಪಾಲಿಸುತ್ತೇವೆ ಎಂದು ಪ್ರಶ್ನೆಗೆ ಉತ್ತರಿಸಿದರು.**

ನೂರು ವರ್ಷ ಕಾಲ ಒಂದು ಸಂಘಟನೆ ಉಳಿಯಬೇಕೆಂದರೆ ಸುಲಭ ಅಲ್ಲ, ಉತ್ತಮ ರಾಷ್ಟ್ರ ನಿರ್ಮಾಣವೇ ಆರ್‌ಎಸ್‌ಎಸ್ ಉದ್ದೇಶ, ದೇಶದ ಒಳಿತಿಗಾಗಿ ಕೆಲಸ ಮಾಡುತ್ತಿದೆ.

ಅದರ ಬಗ್ಗೆ ತಿಳಿದು ಮಾತನಾಡಲಿ ಎಂದು ತಿರುಗೇಟು ನೀಡಿದರು.

ನಾಡಿನ ಜನತೆಯೂ ಆರ್‌ಎಸ್‌ಎಸ್ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದಾರೆ.

ಅದರ ಚಟುವಟಿಕೆಗಳನ್ನು ಯಾರಿಂದಲೂ ಬಂದ್ ಮಾಡಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.

ಆರ್‌ಎಸ್‌ಎಸ್ ಸಂಘಟಕರು ಮದುವೆ ಆಗಿಲ್ಲ ಎಂಬ ಹೇಳಿಕೆಗೆ ಮೊದಲು ಅವರ ನಾಯಕ ರಾಹುಲ್ ಗಾಂಧಿ ಅವರ ಮದುವೆ ಮಾಡಿಸಲಿ ಎಂದು ಟಾಂಗ್ ನೀಡಿದ ಮಂಜು, ರಾಜಕಾರಣ ಮಾಡಲೆಂದೇ ಬಿಜೆಪಿ ಇದೆ, ಪಕ್ಷಕ್ಕೆ ಆರ್‌ಎಸ್‌ಎಸ್ ಮಾರ್ಗದರ್ಶನ ಮಾಡುತ್ತಿದೆ. ಜೆಡಿಎಸ್‌ಗಿಂತ ಕಡೆ ಅನ್ನೋ ಮಾತು ಒಪ್ಪತಕ್ಕದ್ದಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ನಗರಸಭೆ ಮಾಜಿ ಅಧ್ಯಕ್ಷ ಹಾಗೂ ಜಿಲ್ಲಾ ವಕ್ತಾರರಾದ ಆರ್.ಮೋಹನ್ ಕುಮಾರ್, ವಿವಿಧ ಘಟಕಗಳ ಪದಾಧಿಕಾರಿಗಳಾದ ಹರ್ಷಿತ್, ಪ್ರಸನ್ನ ಕುಮಾರ್, ಶ್ರೀಕಾಂತ್ ಇದ್ದರು.

## ಮತ್ತೊಮ್ಮೆ ಬಾಂಬ್ ಬೆದರಿಕೆ ಕರೆ



ಹಾಸನ: ಜಿಲ್ಲಾ ನ್ಯಾಯಾಲಯಕ್ಕೆ ಮತ್ತೊಮ್ಮೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿರುವುದು ಆತಂಕ ಸೃಷ್ಟಿಸಿದೆ. ಸೋಮವಾರ ಬೆಳಿಗ್ಗೆ ಅಧಿಕೃತ ಇ-ಮೇಲ್ ವಿಳಾಸಕ್ಕೆ ಅಪರಿಚಿತರಿಂದ ಬೆದರಿಕೆ ಸಂದೇಶ ಬಂದಿರುವ ಮಾಹಿತಿ ತಿಳಿದು ಭದ್ರತಾ ಸಿಬ್ಬಂದಿ ಎಚ್ಚರಗೊಂಡಿತು.

ನಗರ ಠಾಣೆ ಪೊಲೀಸರು ನ್ಯಾಯಾಲಯ ಆವರಣಕ್ಕೆ ಧಾವಿಸಿ ಪ್ರಾಥಮಿಕ ಪರಿಶೀಲನೆ ನಡೆಸಿದರು. ನಂತರ ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳವನ್ನು ಸ್ಥಳಕ್ಕೆ ಕರೆಸಿಕೊಂಡು ಸಂಪೂರ್ಣ ಆವರಣ ತಪಾಸಣೆ ಮಾಡಲಾಯಿತು.

ನ್ಯಾಯಾಲಯದ ಪ್ರವೇಶ ದ್ವಾರ, ಪಾರ್ಕಿಂಗ್ ಪ್ರದೇಶ, ನ್ಯಾಯಾಧೀಶರ ಕಚೇರಿ, ಒಳಭಾಗ, ದಾಖಲೆ ಕೊಠಡಿ ಸೇರಿದಂತೆ ಪ್ರತಿಯೊಂದು ಭಾಗದಲ್ಲೂ ಸೂಕ್ಷ್ಮ ಪರಿಶೀಲನೆ ನಡೆಸಲಾಗಿದೆ.

ಹೆಚ್ಚುವರಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

ನ್ಯಾಯಾಲಯಕ್ಕೆ ಆಗಮಿಸುವ ಸಾರ್ವಜನಿಕರು ಹಾಗೂ ವಕೀಲರನ್ನೂ ತಪಾಸಣೆ ಬಳಿಕವೇ ಒಳಗೆ ಬಿಡಲಾಗುತ್ತಿದೆ. ಯಾವುದೇ ಅನುಮಾನಾಸ್ಪದ ವಸ್ತು ಕಂಡು ಬಂದಿಲ್ಲ ಎಂದು ಪ್ರಾಥಮಿಕ ಮಾಹಿತಿ ತಿಳಿಸಿವೆ.

ಬೆದರಿಕೆ ಇ-ಮೇಲ್‌ನ ಮೂಲ ಪತ್ತೆ ಹಚ್ಚಲು ಸೈಬರ್ ವಿಭಾಗದ ಸಹಾಯದಿಂದ ತನಿಖೆ ಆರಂಭಿಸಲಾಗಿದೆ. ಇ-ಮೇಲ್ ಯಾವ ಸ್ಥಳದಿಂದ ಕಳುಹಿಸಲಾಗಿದೆ, ಅದರ ಹಿಂದೆ ಯಾರು ಇದ್ದಾರೆ ಎಂಬುದರ ಕುರಿತು ಪೊಲೀಸರು ತೀವ್ರ ಪರಿಶೀಲನೆ ನಡೆಸುತ್ತಿದ್ದಾರೆ.

ಜಿಲ್ಲಾ ನ್ಯಾಯಾಲಯಕ್ಕೆ ಇದು ಎರಡನೇ ಬಾರಿ ಬಾಂಬ್ ಬೆದರಿಕೆ ಇ-ಮೇಲ್ ಬಂದಂತಾಗಿದೆ. ಹಿಂದೆಯೂ ಯಾವುದೇ ಸ್ಫೋಟಕ ವಸ್ತು ಪತ್ತೆಯಾಗಿರಲಿಲ್ಲ. ಆದರೂ ಈ ರೀತಿಯ ಪ್ರಕರಣ ಮರುಕಳಿಸುತ್ತಿರುವುದು ಆತಂಕ ಜೊತೆಗೆ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿರುವುದು ಸುಳ್ಳಲ್ಲ.

# ಯಶ್ ತಾಯಿಗೆ ಮೊದಲ ಹಂತದ ಜಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದಲ್ಲಿ ಖಾಸಗಿ ನಿವೇಶನ ವಿವಾದದಲ್ಲಿ ಯಶ್ ತಾಯಿ ಪುಷ್ಪಾಗೆ ಮೊದಲ ಹಂತದ ಗೆಲುವು ಸಿಕ್ಕಿದೆ. ಪುಷ್ಪಾ ಅವರು ಖರೀದಿಸಿದ್ದ ಸೈಟ್ ಮಾಲೀಕತ್ವ ಸಂಬಂಧ ಜಿಲ್ಲಾ ನ್ಯಾಯಾಲಯ ಮಹತ್ವದ ಮಧ್ಯಂತರ ಆದೇಶ ನೀಡಿದೆ.

ನಾಲ್ಕನೇ ಜೆಎಂಎಫ್‌ಸಿ ನ್ಯಾಯಾಲಯ ಫೆ.11 ರಂದು ವಿಚಾರಣೆ ನಡೆಸಿ, ಮೂಲ ದಾವೆ ಸಂಬಂಧ 2025 ಏ.16 ರಂದು ನೀಡಲಾಗಿದ್ದ ಏಕಪಕ್ಷೀಯ ತೀರ್ಪಿನ ಜಾರಿಗೆ ತಾತ್ಕಾಲಿಕ ತಡೆ ನೀಡಿದೆ. ಸೈಟ್‌ನ ಮಾಲೀಕತ್ವವನ್ನು ಲಕ್ಷ್ಮಮ್ಮ ಅವರ ಪರವಾಗಿ ಜಿಪಿಎ ಹೋಲ್ಡರ್ ದೇವರಾಜು ಹೊಂದಿದ್ದಾರೆಂದು ಹೇಳಲಾಗುತ್ತಿದ್ದು, ಅವರು ದಾಖಲಿಸಿದ್ದ ಒಎಸ್ ನಂ. 672/2023 ಪ್ರಕರಣದಲ್ಲಿ ನೀಡಿದ್ದ ಆದೇಶದ ಅನುಷ್ಠಾನಕ್ಕೆ ನ್ಯಾಯಾಲಯ ತಡೆ ನೀಡಿದೆ.

ತಮ್ಮನ್ನು ಕಕ್ಷಿದಾರರಾಗಿ ಪರಿಗಣಿಸದೆ ಏಕಪಕ್ಷೀಯ ಆದೇಶ ನೀಡಲಾಗಿದೆ ಎಂದು ಪುಷ್ಪಾ ನ್ಯಾಯಾಲಯವನ್ನು ದೂಷಿಸಿದ್ದರು. ಜೊತೆಗೆ, ಕೋರ್ಟ್ ಆದೇಶ ಬಂದ ನಂತರ 90 ದಿನಗಳೊಳಗೆ ಮೇಲ್ಮನವಿ ಸಲ್ಲಿಸದ ಹಿನ್ನೆಲೆಯಲ್ಲಿ ವಿಳಂಬ ಅರ್ಜಿ ಯನ್ನೂ ಅವರು ಸಲ್ಲಿಸಿದ್ದರು. ನ್ಯಾಯಾಲಯ ವಿಳಂಬ ಅರ್ಜಿಯನ್ನು ಮಾನ್ಯಗೊಳಿಸಿ, ಪ್ರಕರಣದಲ್ಲಿ






ಕಕ್ಷಿದಾರರಾಗಿ ಹಾಜರಾಗಲು ಅವಕಾಶ ನೀಡಿದೆ.

ಇದಲ್ಲದೆ, ಪ್ರಸ್ತುತ ದಾಖಲಾಗಿರುವ ದಾವೆ ಇತ್ಯರ್ಥವಾಗುವವರೆಗೆ ಒಎಸ್ ನಂ. 672/2023ರ ಆದೇಶ ಜಾರಿ ಅಥವಾ ಅನುಷ್ಠಾನಕ್ಕೆ ಸಂಪೂರ್ಣ ತಡೆ ನೀಡಲಾಗಿದೆ. ಹಾಗೆಯೇ, ವಿವಾದಿತ ಸೆಡ್ಯೂಲ್ ಪ್ರಾಪರ್ಟಿಯನ್ನು ಪರಭಾರೆ ಮಾಡುವುದು ಅಥವಾ ಮೂಲ ಸ್ವರೂಪ ಬದಲಾವಣೆ ಮಾಡುವುದನ್ನು ಅರ್ಜಿದಾರರಿಗೆ ನಿರ್ಬಂಧಿಸಲಾಗಿದೆ.

ಮುಂದಿನ ವಿಚಾರಣೆಯನ್ನು ಫೆ.18ಕ್ಕೆ ಮುಂದೂಡಿದೆ.

ಯಶ್ ತಾಯಿ ವಿಶ್ವಾಸ: ಈ ನಡುವೆ ನ್ಯಾಯಾಲಯ ನೀಡಿರುವ ತಡೆಯಾಜ್ಞೆ ಮೇಲೆ ಪುಷ್ಪಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸದರಿ ಜಾಗ ತಮ್ಮದೋ ಅಥವಾ ದೇವರಾಜು ಅವರದ್ದೋ ಎಂಬುದನ್ನು ಪರಿಶೀಲನೆ ನಡೆಸಿ ನ್ಯಾಯಾಲಯ ತಡೆಯಾಜ್ಞೆ ನೀಡಿದೆ ಎಂದು ಅವರು ತಿಳಿಸಿದ್ದಾರೆ.

ನ್ಯಾಯಾಲಯ ನಮಗೂ ವಾದಿಸಲು ಅವಕಾಶ ನೀಡಿದೆ. ಮುಂದಿನ ದಿನಗಳಲ್ಲಿ ಜಾಗ ಯಾರಿಗೆ ಸೇರಿದ್ದು ಎಂಬುದು ಸ್ಪಷ್ಟವಾಗುತ್ತದೆ ಎಂಬ ನಂಬಿಕೆ ಇದೆ ಎಂದು ಹೇಳಿದರು.

ಅವರು ಹೇಳುತ್ತಿರುವುದು ಬೇರೆ ಜಾಗ. ಯಾವುದೋ ಜಾಗದ ಬದಲು ಈ ಜಾಗವನ್ನು ನಮ್ಮದು ಎಂದು ಹೇಳುತ್ತಿದ್ದಾರೆ. ನಮ್ಮ ಹೆಸರು, ವಿಳಾಸ ನೀಡಿರುವುದರಿಂದಲೇ ಕೋರ್ಟ್ ತಡೆಯಾಜ್ಞೆ ನೀಡಿದೆ.

ತಾವು ಕಾನೂನು ಪ್ರಕಾರ ಸರ್ಕಾರಕ್ಕೆ ಹಣ ಪಾವತಿಸಿ ನಿವೇಶನ ಪಡೆದುಕೊಂಡಿದ್ದೇವೆ ಎಂದ ಅವರು, ಏಕಾಏಕಿ ಜೆಸಿಬಿ ತಂದು ಕಾಂಪೌಂಡ್ ತೆರವುಗೊಳಿಸಿದ್ದಾರೆ. ಕಾಂಪೌಂಡ್ ಜೊತೆ ಮನೆಗೂ ಹಾನಿ ಮಾಡಿದ್ದಾರೆ. ಇದಕ್ಕೆ ಕಾರಣರಾದವರ ಮೇಲೆ ಕ್ರಮವಾಗಬೇಕು ಎಂದು ಒತ್ತಾಯಿಸಿದ್ದಾರೆ.

ಪೊಲೀಸರ ನಡೆಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಪೊಲೀಸರು ಅವರಿಗೆ ಬೆಂಬಲ ಕೊಟ್ಟರು, ನಮಗೆ ಕೊಡಲಿಲ್ಲ. ಎಸ್‌ಪಿ ಅವರಿಗೆ ದೂರು ನೀಡಿ ನನ್ನ ಕಷ್ಟ ತಿಳಿಸುತ್ತೇನೆ. ಜೆಸಿಬಿ ಇದುವರೆಗೂ ಸೀಜ್ ಮಾಡಿಲ್ಲ ಎಂದು ದೂರಿದರು.

ಯಶ್ ತಾಯಿ ಜಾಗ ಒತ್ತುವರಿ ಮಾಡಿದ್ದಾರೆ ಎಂದು ಸುಳ್ಳು

ನನಗೆ ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಸುತ್ತೇನೆ ಎಂದ ಅವರು, ನಾವು ಜಾಗ ಮಾರುವುದೂ ಇಲ್ಲ, ಬಾಡಿಗೆಗೆ ನೀಡುವುದೂ ಇಲ್ಲ. ಸ್ವಂತ ಬಳಕೆಗಾಗಿ ಮಾತ್ರ ಇಟ್ಟುಕೊಂಡಿದ್ದೇವೆ ಎಂದು ಸ್ಪಷ್ಟಪಡಿಸಿದರು.

ನಿವೇಶನ ವಿವಾದ ಹಿನ್ನೆಲೆ ಪ್ರಕರಣ ನ್ಯಾಯಾಲಯದ ವಶದಲ್ಲಿದ್ದು, ಮುಂದಿನ ವಿಚಾರಣೆ ಮೇಲೆ ಎಲ್ಲರ ಗಮನ ನೆಟ್ಟಿದೆ.

# ಋತುಚಕ್ರ ರಜೆ ಅಗತ್ಯತೆ-ಅರಿವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಿಳೆಯರ ಋತುಚಕ್ರ ರಜೆಯ ಅಗತ್ಯತೆ ಮತ್ತು ಅರಿವು ಮೂಡಿಸುವ ಉದ್ದೇಶದಿಂದ ಫೆ.27 ರಂದು ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸಂತೋಷ್‌ಲಾಡ್ ಅಭಿಮಾನಿಗಳ ಬಳಗದ ಹೆಚ್.ಆರ್. ವಿನೋದ್ ಕುಮಾರ್ ಮತ್ತು ಇಮ್ರಾನ್ ಖಾನ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಮಹಿಳೆಯರ ಆರೋಗ್ಯ ಮತ್ತು ಗೌರವದ ದೃಷ್ಟಿಯಿಂದ ರಾಜ್ಯ ಸರ್ಕಾರ ಋತುಚಕ್ರ ರಜೆ ಜಾರಿಗೆ ತಂದಿದೆ. ಈ ಬಗ್ಗೆ ಯುವ ಪೀಳಿಗೆಗೆ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶ. ಋತುಚಕ್ರದ ಸಂದರ್ಭದಲ್ಲಿ ಮಹಿಳೆಯರು ಒತ್ತಡಕ್ಕೆ ಒಳಗಾದಾಗ ಅದು ಕುಟುಂಬ ಮತ್ತು ಸಮಾಜದ ಮೇಲೆ ಪರಿಣಾಮ ಬೀರುತ್ತದೆ.

ಇಂತಹ ಸಂದರ್ಭದಲ್ಲಿ ಮಹಿ ಮಾನಸಿಕ, ದೈಹಿಕವಾಗಿ ಕುಗ್ಗುವುದನ್ನು ಹಲವು ವೈಜ್ಞಾನಿಕ ವರದಿ ಮೂಲಕ ಮನಗಂಡ ಸರ್ಕಾರ ಒಂದು ದಿನದ ರಜೆ ನೀಡಿದೆ. ಇದರಲ್ಲಿ ಕಾರ್ಮಿಕ ಸಚಿವ




ಸಂತೋಷ್ ಎಸ್.ಲಾಡ್ ಪ್ರಮುಖ ಪಾತ್ರವಹಿಸಿದ್ದಾರೆ. ಸಚಿವರ ಜನ್ಮದಿನ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಈ ಪ್ರಬಂಧ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಸ್ಪರ್ಧೆಯಲ್ಲಿ ಪ್ರಸ್ತುತ ಸಾಲಿನ ಪಿಯುಸಿ ಹಾಗೂ ಎಲ್ಲಾ ಸ್ನಾತಕ ಪದವಿ ಹಂತದ ವಿದ್ಯಾರ್ಥಿನಿಯರಿಗೆ ಮಾತ್ರ ಅವಕಾಶ ನೀಡಲಾಗಿದೆ. ಪ್ರಬಂಧ ಕನಿಷ್ಠ 5 ಪುಟ ಇರಬೇಕು. ಅವಧಿ ಒಂದೂವರೆ ಗಂಟೆ ಇರಲಿದೆ.

ಪ್ರಥಮ ಬಹುಮಾನ 25 ಸಾವಿರ, ದ್ವಿತೀಯ ಬಹುಮಾನ 10 ಮತ್ತು ತೃತೀಯ ಬಹುಮಾನ 5 ಸಾವಿರ ಹಾಗೂ 50 ಸಮಾಧಾನಕರ ಬಹುಮಾನ ನೀಡಲಾಗುವುದೆಂದರು.

ನಗರದ ಎಂಜಿ ರಸ್ತೆಯ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಲ್ಲಿ ಪ್ರಬಂಧ ಬರೆಯಕಿದ್ದು, ಸ್ಪರ್ಧಾಳುಗಳು ಮಧ್ಯಾಹ್ನ 12:20ಕ್ಕೆ ಹಾಜರಾಗಬೇಕು. ಕಾಲೇಜಿನ ಗುರುತಿನ ಚೀಟಿ ತರಬೇಕು. ಪೆನ್ ಮತ್ತು ಪೇಪರ್ ಒದಗಿಸಲಾಗುವುದು. ಲಘು ಉಪಹಾರದ ವ್ಯವಸ್ಥೆಯೂ ಇದ್ದು, ನೋಂದಣಿಗೆ ಫೆ.22 ಕಡೆಯ ದಿನ ಎಂದರು.

ಜಿಲ್ಲೆಯ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ರಾಜು, ಮೊಹಮ್ಮದ್ ಮೋಹಿನ್, ಮುಜಾಯಿದ್ ಇದ್ದರು

# ಶಿವರಾತ್ರಿ ಪ್ರಯುಕ್ತ ಕಾಶಿಪುರ ಉತ್ಸವ : ಭವ್ಯ ಆಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಾಶಿವರಾತ್ರಿ ಅಂಗವಾಗಿ ಕಾಶಿಪುರ ಉತ್ಸವವನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಸ್ಥಳೀಯರು ಹಾಗೂ ವೇದಭಾರತೀ ಸದಸ್ಯರು ಶ್ರಮದಾನ ನಡೆಸಿ ದೇವಾಲಯ ಹಾಗೂ ಸುತ್ತಮುತ್ತಲ ಪ್ರದೇಶವನ್ನು ಸ್ವಚ್ಛಗೊಳಿಸಿದರು.

ಮುಖ್ಯ ರಸ್ತೆಯಿಂದ ದೇವಾಲಯದವರೆಗೆ ಶೋಭಾಯಾತ್ರೆ ನಡೆಯಿತು. ಭಜನೆ, ವೇದಘೋಷ ಹಾಗೂ ನಾದಸ್ವರಗಳೊಂದಿಗೆ ಸಾಗಿದ ಮೆರವಣಿಗೆ ಭಕ್ತರಲ್ಲಿ ಭಕ್ತಿ ಸಂಭ್ರಮ ಮೂಡಿಸಿತು. ಆರ್‌ಎಸ್‌ಎಸ್ ಜ್ಯೇಷ್ಠ ಪ್ರಚಾರಕರಾದ ಸೀತಾರಾಮ ಕೆದಿಲಾಯರು ಭಾಗವಹಿಸಿದ್ದರು.

ನಂತರ ವೇದಮಂತ್ರೋಚ್ಚಾರಣೆಯೊಂದಿಗೆ ಯಜ್ಞ ಕಾರ್ಯಕ್ರಮ ನೆರವೇರಿತು. ದೇವಾಲಯದ ಜೀರ್ಣೋದ್ಧಾರ ಪೂರ್ಣಗೊಳ್ಳುವವರೆಗೆ ಪ್ರತೀ ತಿಂಗಳು ಶ್ರಮದಾನ ಮತ್ತು ಸತ್ಸಂಗ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

ಪರಮೇಶ್, ಹರಿಹರಪುರ ಶ್ರೀಧರ್, ಶಾರದಾ, ನಟರಾಜು, ಪವಿತ್ರ, ಡಾ. ಶ್ರೀವತ್ಸ ಎಸ್. ವಟಿ, ಉಮಾಮಹೇಶ್ವರ ಗುರುಜಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಪಿ.ಎಂ.ಶ್ರೀ ಸರ್ಕಾರಿ ಶಾಲೆಗೆ ಶತಮಾನೋತ್ತರ ರಜತ ಮಹೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಗ್ರಾಮದ ಪಿ.ಎಂ.ಶ್ರೀ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ತನ್ನ 125ನೇ ಶತಮಾನೋತ್ತರ ರಜತ ಮಹೋತ್ಸವ ಹಾಗೂ ವಾರ್ಷಿಕೋತ್ಸವವನ್ನು ಫೆಬ್ರವರಿ 19, 2026ರಂದು ಭವ್ಯವಾಗಿ ಆಚರಿಸಲು ಸಜ್ಜಾಗಿದೆ.

1899ರಲ್ಲಿ ಸ್ಥಾಪನೆಯಾದ ಈ ಶಾಲೆ 126 ವರ್ಷಗಳ ಸುದೀರ್ಘ ಪಯಣವನ್ನು ಪೂರೈಸಿ ಸಾವಿರಾರು ವಿದ್ಯಾರ್ಥಿಗಳ ಬದುಕಿಗೆ ದಾರಿದೀಪವಾಗಿದೆ. ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಪಾಠ ಬೋಧನೆ ನಡೆಯುತ್ತಿದ್ದು, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲೂ ಗಮನಾರ್ಹ ಸಾಧನೆ ಮಾಡಿದೆ.

ಮುಖ್ಯ ಸಮಾರಂಭಕ್ಕೆ ಮಾಜಿ ಸಚಿವ ಹಾಗೂ ಶಾಸಕ ಎ. ಮಂಜು ಅಧ್ಯಕ್ಷತೆ ವಹಿಸಲಿದ್ದಾರೆ. ಹೆಚ್.ಡಿ. ರೇವಣ್ಣ ಘನ ಉಪಸ್ಥಿತಿ ವಹಿಸಲಿದ್ದು, ಸಂಸದ ಶ್ರೇಯಸ್ ಎಂ. ಪಟೇಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಹಳೆಯ ವಿದ್ಯಾರ್ಥಿಗಳ ಸನ್ಮಾನ ಹಾಗೂ ವಿಶೇಷ ಕಾರ್ಯಕ್ರಮಗಳು ನಡೆಯಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಶಾಲಾ ಆಡಳಿತ ಮಂಡಳಿ ಮನವಿ ಮಾಡಿದೆ.

# ಇತಿಹಾಸದಲ್ಲಿ ಈ ದಿನ

## ಫೆಬ್ರವರಿ-17

**1568** ಆಡ್ರಿನೋಪಲ್ ಒಪ್ಪಂದ: ಪವಿತ್ರ ರೋಮನ್ ಚಕ್ರವರ್ತಿ ಮ್ಯಾಕ್ಸಿಮಿಲಿಯನ್ ಮತ್ತು ಒಟ್ಟೋಮನ್ ಸುಲ್ತಾನ್ ಸೆಲಿಮ್ ರ ಪ್ರತಿನಿಧಿಗಳು ಹ್ಯಾಬ್ಸ್ ಬರ್ಗ್ ರಾಜಪ್ರಭುತ್ವ ಮತ್ತು ಒಟ್ಟೋಮನ್ ಸಾಮ್ರಾಜ್ಯದ ನಡುವಿನ ಯುದ್ಧವನ್ನು ಕೊನೆಗೊಳಿಸುವ ಶಾಂತಿ ಯೋಜನೆಗೆ ಒಪ್ಪುತ್ತಾರೆ

**1865** ರಲ್ಲಿ ವಿಲಿಯಂ ಟಿ. ಶೆರ್ಮನ್ ನೇತೃತ್ವದ ಒಕ್ಕೂಟ ಪಡೆಗಳು ಕೊಲಂಬಿಯಾ ರಾಜ್ಯದ ರಾಜಧಾನಿ ದಕ್ಷಿಣ ಕೆರೊಲಿನಾವನ್ನು ವಶಪಡಿಸಿಕೊಂಡವು. ರಾತ್ರಿಯ ಹೊತ್ತಿಗೆ ನಗರವು ಉರಿಯುತ್ತಿತ್ತು , ಬಲವಾದ ಗಾಳಿಯಿಂದ ನಗರದ ಬಹುಭಾಗವನ್ನು ನಾಶಮಾಡಿತು. ಬೆಂಕಿ ಯಾವ ಕಡೆಯಿಂದ ಪ್ರಾರಂಭವಾಯಿತು ಎಂಬುದು ತಿಳಿದಿಲ್ಲ.

**1876** ರಲ್ಲಿ, ಮೈನೆ ಈಸ್ಟ್‌ಪೋರ್ಟ್‌ನಲ್ಲಿ ಜೂಲಿಯಸ್ ವುಲ್ಫ್ ಅವರಿಂದ ಮೊದಲು ಸಾರ್ಡೀನ್‌ಗಳನ್ನು ಡಬ್ಬಿಯಲ್ಲಿ ಇಡಲಾಯಿತು.

**1975** ರ ಜನಾಭಿಪ್ರಾಯ ಸಂಗ್ರಹಣೆಯ ಸಮಯದಲ್ಲಿ ಮಾರ್ಗರೇಟ್ ಥ್ಯಾಚರ್ ಯುರೋಪಿನಲ್ಲಿಯೇ ಉಳಿಯಲು ಪ್ರಚಾರ ಮಾಡುತ್ತಿದ್ದಾರೆ.ಬ್ರಿಟನ್ ಯುರೋಪಿಯನ್ ಸಮುದಾಯಕ್ಕೆ ಸೇರ್ಪಡೆ

**1972:** ಬ್ರಿಟಿಷ್ ಸಂಸತ್ತು ಯುರೋಪಿಯನ್ ಆರ್ಥಿಕ ಸಮುದಾಯಕ್ಕೆ ಸೇರಲು ಮತ ಚಲಾಯಿಸಿತು.

# ಹೇಮಾವತಿ ನದಿಗೆ ಸೇತುವೆ ನಿರ್ಮಾಣಕ್ಕೆ 25 ಕೋಟಿ ರೂ. ಅನುದಾನ ಬೇಡಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಹೊಸ ಸೇತುವೆ ನಿರ್ಮಾಣ ಹಾಗೂ ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳ ಪುನರ್‌ನಿರ್ಮಾಣಕ್ಕೆ ಅನುದಾನ ಒದಗಿಸುವಂತೆ ಶಾಸಕ ಸಿಮೆಂಟ್ ಮಂಜು ಸರ್ಕಾರವನ್ನು ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ಹಾನುಬಾಳು ಹೋಬಳಿಯ



ಹಾದಿಗೆಯಿಂದ ಬೇಲೂರು ತಾಲ್ಲೂಕಿನ ಅರೇಹಳ್ಳಿಗೆ ಸಂಪರ್ಕ ಕಲ್ಪಿಸಲು ಹೇಮಾವತಿ ನದಿಗೆ ಅಡ್ಡಲಾಗಿ ಹೊಸ ಸೇತುವೆ ಹಾಗೂ ರಸ್ತೆ ನಿರ್ಮಾಣಕ್ಕೆ ?25 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ವಿನಂತಿಸಲಾಗಿದೆ ಎಂದು ತಿಳಿಸಿದರು.

ಸೇತುವೆ ಇಲ್ಲದ ಕಾರಣ ರೈತರು ಹಾಗೂ ಸಾರ್ವಜನಿಕರು ಸುಮಾರು 42 ಕಿ.ಮೀ ಸುತ್ತಾಡಿ ತೆರಳಬೇಕಾಗುತ್ತಿದೆ. ಸೇತುವೆ ನಿರ್ಮಾಣವಾದರೆ ಕೇವಲ 10 ಕಿ.ಮೀ ದೂರವನ್ನು 20 ನಿಮಿಷಗಳಲ್ಲಿ ಕ್ರಮಿಸಬಹುದು ಎಂದು ವಿವರಿಸಿದರು.

ಮಳೆಗಾಲದ ವೇಳೆ ಗ್ರಾಮೀಣ ಪ್ರದೇಶಗಳಲ್ಲಿ ಸಂಪರ್ಕ ಕಡಿತವಾಗುತ್ತಿರುವ ಹಿನ್ನೆಲೆಯಲ್ಲಿ ವಿವಿಧ ಗ್ರಾಮಗಳಲ್ಲಿ ತಲಾ ?5 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಾಣಕ್ಕೆ ಮನವಿ ಮಾಡಲಾಗಿದೆ. ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಶಾಸಕರು ತಿಳಿಸಿದ್ದಾರೆ.

# ಶರಣರ ಸಾಹಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಮಾಜದಲ್ಲಿ ಎಂದಿಗೂ ಕೂಡ ಮಾನವರ ನಡುವೆ ಜಾತಿ, ವರ್ಗಗಳ ಭೇದ ಇಲ್ಲದೆ ಎಲ್ಲರೂ ಒಂದೇ ಎಂಬ ಭಾವನೆ ನಮ್ಮಲ್ಲಿ ಇದರೆ ಮಾತ್ರ ಶರಣರ ಸಾಹಿತ್ಯವನ್ನು ಜೀವನದಲ್ಲಿ ಅಳವಡಿಸಿಕೊಳಲು ಸಾಧ್ಯ ಎಂದು ಕಾರ್ಯಕ್ರಮ ಕುರಿತು ಜಿಲ್ಲಾ ಬಂಜಾರ ಸಂಘದ ಉಪಾಧ್ಯಕ್ಷ ಧರ್ಮಪ್ಪನವರು ತಿಳಿಸಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಕನ್ನಡ ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಭಾನುವಾರ ನಡದ ಸಂತ ಸೇವಾಲಾಲ್ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿ, ಬಂಜಾರ ಸಮಾಜದ ಆರಾಧ್ಯ ದೇವ ಸಂತ ಸೇವಾಲಾಲ್ ರವರು, ಅವರ ಆದ್ಯಾತ್ಮಿಕ, ಧಾರ್ಮಿಕ, ಸಾಹಿತ್ಯಗಳನ್ನು ಜೀವನದಲ್ಲಿ ಅವಲಬಿಸಿಕೊಂಡು ಬಂಜಾರ



ಸಮುದಾಯವಾನ್ನು ಸುದೀರ್ಘವಾಗಿ ಜಗತ್ತಿನಲ್ಲಿ ಮೊನ್ನಡೆಸೋಣ. ಪ್ರಕೃತಿಯನ್ನು ನಾವು ಉಳಿಸಿದರೆ ಪ್ರಕೃತಿ ನಮ್ಮನು ಉಳಿಸುತ್ತದೆ, ಪ್ರಕೃತಿಯ ಸೃಷ್ಟಿಯೇ ಮಾನವ ಆದ್ದರಿಂದ ಗಿಡ ಮರಗಳನ್ನು ಬೆಳೆಸುತ್ತಾ ಪ್ರಕೃತಿಯನ್ನು ಸಮೃದ್ಧಿಸಿದರೆ ಪ್ರಕೃತಿಯು ಎಲ್ಲರ ಜೀವ ರಕ್ಷಣೆ ಮಾಡುತ್ತದೆ. ಸಂತ ಸೇವಾಲಾಲ್ ಅವರು ಸಮಾಜವನ್ನು ತಿದ್ದಲು ಸನ್ಯಾಸತ್ವವೇ ಸರಿಯೆಂದು ವಿವಾಹವನ್ನು ತೊರೆದು ಸಮಾಜದ ಒಳಿತಿಗಾಗಿ ಸನ್ಯಾಸಿ ಪಟ್ಟವನ್ನು ಸ್ವೀಕರಿಸಿದರು. ಸೇವಾಲಾಲರು ಅನೇಕ ಪ್ರವಚನಗಳನ್ನು ಮೂಲಕ ಮನುಷ್ಯ ತಾನು ಭೂಮಿಗೆ ಬಂದ ಕಾರಣ ತಿಳಿದುಕೊಂಡು, ನಿರ್ಮಲ ನಡೆನುಡಿಗಳನ್ನು ಅನುಸರಿಸಬೇಕು, ಮಾನವ ಬದುಕಿನ ಬಗ್ಗೆ ನಿತ್ಯಾ ಯೋಚಿಸಬೇಕು ಹಸಿವು, ತ್ರಿಶೆ, ಮೋಹ, ಮಾಮಕಾರವನ್ನು ತಿಳಿದುಕೊಳ್ಳಬೇಕು ಎಂದು ಮನುಷ್ಯರು ಜೀವನದ ಅರಿವಿನ ಬಗ್ಗೆ ಮಾತನಾಡಿದರು.

ನೌಕರರ ಸಂಘದ ಖಜಾಂಚಿ ಹೇಮಂತ್ ಮಾತನಾಡಿ, ಜನಪದ ಇತಿಹಾಸವು ಜಗತ್ತಿನಲ್ಲಿ ನೇರವಾದ ಇತಿಹಾಸ, ಜನಪದ ಹಾಡುಗಳ ಮೂಲಕ ಇರುವಂತಹ ಸತ್ಯಗಳನ್ನು ಜಗತ್ತಿಗೆ ಅರಿವು ಮೂಡಿಸುವ ಮೂಲಕ ಶರಣರ ಶ್ರೇಷ್ಠತೆಯನ್ನು ಕಾಣಬಹುದು. ಅವರ ತತ್ವ ಸಿದ್ಧಾಂತವನ್ನು ಪಾಲಿಸೋಣ ಎಂದು ಕರೆ ನೀಡಿದರು.

# ಮಹಾಶಿವರಾತ್ರಿ ಅಂಗವಾಗಿ ಅನ್ನಸಂತರ್ಪಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶ್ರೀ ಶಿವಕುಮಾರ ಸ್ವಾಮೀಜಿ ಸ್ವಯಂಸಹಾಯ ಸಂಘದ ವತಿಯಿಂದ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ 6ನೇ ವರ್ಷದ ಮಹಾ ಅನ್ನಸಂತರ್ಪಣ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಆಯೋಜಿಸಲಾಯಿತು. ಪ್ರತಿವರ್ಷದಂತೆ ಈ ವರ್ಷವೂ ಸಾವಿರಾರು ಭಕ್ತರಿಗೆ ಉಚಿತ ಅನ್ನಪ್ರಸಾದ ವಿತರಣೆ ಯಶಸ್ವಿಯಾಗಿ ನಡೆಯಿತು.

ನಗರದ ಸುಭಾಷ್ ಚೌಕದಲ್ಲಿರುವ ಮಲ್ಲೇಶ್ವರ ದೇವಸ್ಥಾನ ಹತ್ತಿರ ಮಹಾಶಿವರಾತ್ರಿ ವಿಶೇಷ ದಿನದ ಅಂಗವಾಗಿ ಪೂಜೆ, ಭಜನೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳ ನಂತರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ ನೆರವೇರಿತು. ಸಾರ್ವಜನಿಕರು, ಭಕ್ತರು ಹಾಗೂ ದಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರಸಾದ ಸ್ವೀಕರಿಸಿದರು.

ಸಮಾಜ ಸೇವಕ ಕಾಂತರಾಜು ಮಾತನಾಡಿ, ಪ್ರತಿ ವರ್ಷ ಶಿವರಾತ್ರಿ ಮರುದಿನ ಮಲ್ಲೇಶ್ವರ ವೃತ್ತದಲ್ಲಿ ಅನ್ನದಾನ ಕಾರ್ಯಕ್ರಮವನ್ನು ಸಂಘದ ವತಿಯಿಂದ ನೆರವೇರಿಸಲಾಗುತ್ತಿದೆ. ಮುಂದೆಯೂ ಇನ್ನಷ್ಟು ವಿಸ್ತೃತವಾಗಿ ಈ ಕಾರ್ಯ ಮುಂದುವರಿಯಲಿ ಎಂದು ಹಾರೈಸಿದರು.

ಎಂ.ಕೆ. ಬಸವರಾಜು ಮಾತನಾಡಿ, ಈ ಬಾರಿ ಏಳನೇ ವರ್ಷದ ಅನ್ನಸಂತರ್ಪಣೆಯನ್ನು ಅದ್ದೂರಿಯಾಗಿ ನಡೆಸಲಾಗಿದೆ. ಸುಮಾರು 8 ಸಾವಿರಕ್ಕೂ ಹೆಚ್ಚು ಜನರಿಗೆ ಅನ್ನಪ್ರಸಾದ ವಿತರಿಸಲಾಗಿದೆ. ಕಾರ್ಯಕ್ರಮ ಯಶಸ್ವಿಗೆ ಸ್ಥಳೀಯ ವ್ಯಾಪಾರಿಗಳು ಹಾಗೂ ಸಾರ್ವಜನಿಕರ ಸಹಕಾರ ದೊರೆತಿದೆ. ದೇವಸ್ಥಾನದ ಪ್ರಧಾನ ಅರ್ಚಕರಾದ ಅಣ್ಣಯ್ಯ ಅವರು ಪ್ರೋತ್ಸಾಹ ನೀಡಿದ್ದಾರೆ ಎಂದು ತಿಳಿಸಿದರು.

ಮಂಜುನಾಥ್, ನಾಗರಾಜು, ಶಶಿಧರ್, ಪ್ರವೀಣ್, ದಿನೇಶ್, ಮಂಜೇಗೌಡ, ಸಚಿನ್, ಹರೀಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮೂಲನಿವಾಸಿ ಮುಕ್ತ ಭಾರತ...?

## ಇತಿಹಾಸ ಗೊಂದಲ ನಿವಾರಿಸುವ ಕೃತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮೂಲನಿವಾಸಿ ಮುಕ್ತ ಭಾರತ...?'' ಕೃತಿ ಇತಿಹಾಸ, ಸಂಸ್ಕೃತಿ ಮತ್ತು ಸಾಮಾಜಿಕ ಚರ್ಚೆಗಳ ನಡುವೆ ಉದ್ಭವಿಸಿರುವ ಗೊಂದಲಗಳನ್ನು ತಾರ್ಕಿಕವಾಗಿ ವಿಶ್ಲೇಷಿಸುವ ಪ್ರಯತ್ನವೆಂದು ಎಂದು ಸರಕಾರಿ ಕಲಾ ಮತ್ತು ವಾಣಿಜ್ಯ ಸ್ನಾತಕೋತ್ತರ ಕಾಲೇಜಿನ ಪ್ರಾಂಶುಪಾಲ ಬಿ ಎಂ ಇರ್ಷಾದ್ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಭವನದಲ್ಲಿ ಮಲ್ನಾಡ್ ಮೆಹಬೂಬ್ ಅವರು ರಚಿಸಿದ ಮೂಲನಿವಾಸಿ ಮುಕ್ತ ಭಾರತ ಪುಸ್ತಕ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು,

ಭಾರತೀಯ ಇತಿಹಾಸವನ್ನು ಏಕಪಕ್ಷೀಯವಾಗಿ ಅರ್ಥೈಸುವ ಪ್ರವೃತ್ತಿಗೆ ಪ್ರಶ್ನೆ ಎತ್ತುವ ಈ ಕೃತಿ, 'ಮೂಲ ನಿವಾಸಿ' ಎಂಬ ಪರಿಕಲ್ಪನೆಯನ್ನು ಭಾವನಾತ್ಮಕ ಘೋಷಣೆಯ ಮಟ್ಟಕ್ಕೆ ಇಳಿಸದೆ, ಅದರ ಹಿಂದೆ ಇರುವ ಇತಿಹಾಸಾತ್ಮಕ ಹಾಗೂ ರಾಜಕೀಯ ವಾದಗಳನ್ನು




ವಿಶ್ಲೇಷಣಾತ್ಮಕವಾಗಿ ಪರಿಶೀಲಿಸಿದೆ ಎಂದು ಅವರು ಹೇಳಿದರು.

ವಿಭಜನಾ ಮನೋಭಾವದ ಬದಲಿಗೆ ಸಂವಾದ ಮತ್ತು ಅಧ್ಯಯನದ ದಾರಿಯನ್ನು ತೋರಿಸುವ ಗುಣ ಈ ಕೃತಿಗೆ ವಿಶೇಷತೆ ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ದೇಶದ ನಿರ್ಮಾಣ ಒಂದೇ ಸಂಸ್ಕೃತಿಯ ಫಲವಲ್ಲ, ಹಲವು ಸಂಸ್ಕೃತಿಗಳ ಸಂಯೋಜನೆಯ ಫಲವೆಂಬ ದೃಷ್ಟಿಕೋನವನ್ನು ಲೇಖಕರು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ ಓದುಗರಲ್ಲಿ ವಿಮರ್ಶಾತ್ಮಕ ಮನೋಭಾವ ಬೆಳೆಸುವ ಸಾಮರ್ಥ್ಯ ಹೊಂದಿದೆ ಎಂದು ಅವರು ಅಭಿಪ್ರಾಯಪಟ್ಟರು.

ಆಲೂರಿನ ಕನ್ನಡ ಉಪನ್ಯಾಸಕರಾದ ರೋಹಿತ್ ಅಗಸರಹಳ್ಳಿ ಪುಸ್ತಕದ ಕುರಿತು ಮಾತನಾಡಿ, ಚರಿತ್ರೆಯ ದ್ವಂದ್ವಗಳನ್ನು ನಿವಾರಿಸುವ ಒಂದು ಪ್ರಯತ್ನ ಈ ಕೃತಿಯಲ್ಲಿ ಅಡಗಿದೆ ಎಂದು ಹೇಳಿದರು.

ಚರಿತ್ರೆಯನ್ನು, ಚರಿತ್ರೆಯಾಗಿ ಮಾತ್ರ ನಾವು ನೋಡಬೇಕು. ಚರಿತ್ರೆ ಮತ್ತು ಇತಿಹಾಸದ ಬಗ್ಗೆ ಸಾವಿರಾರು ತರಹದ ವ್ಯಾಖ್ಯಾನುಗಳಿವೆ. ಭಾರತೀಯ ಚರಿತ್ರೆಯ ಸಂಗತಿಗಳು ಬೈನರಿಯಾಗಿ ನಮ್ಮ ಕಣ್ಣ ಮುಂದೆ ಕುಣಿಯುತ್ತಿದೆ ಎಂದರು.

ಸಾಹಿತಿ ಹಾಗೂ ಉಪನ್ಯಾಸಕಿ ಡಾ. ಶಾಂತ ಅತ್ನಿ ಮಾತನಾಡಿ, ಮೂಲ ನಿವಾಸಿ ಮುಕ್ತ ಭಾರತ ಕೃತಿ

ಬಹುತ್ವ, ಸೌಹಾರ್ದತೆ , ಸಾರುತ್ತದೆ, ಈ ದೇಶದಲ್ಲಿ ಪರಸ್ಪರ ನಂಬಿಕೆಗಳಿಂದ ಬದುಕಬೇಕು ಕೆಡುಕುಗಳಿಂದ ದೂರ ಇರಬೇಕು ಐಕ್ಯತೆಯೇ ನಮ್ಮ ಶಕ್ತಿ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಮಾತನಾಡಿ, ದೇಶ ಆಳುವ ಜನರಿಗೆ ಸೌಹಾರ್ದತೆಯ ಭಾರತ ಬೇಕಾಗಿಲ್ಲ, ಅಧಿಕಾರ ಮತ್ತು ಸಂಪತ್ತು ಕ್ರೂಡೀಕರಿಸಲು ಇಲ್ಲಸಲ್ಲದ ವಿಷಯಗಳನ್ನು ಚಾಲನೆಗೆ ಬಿಡುತ್ತಿದ್ದಾರೆ ಎಂದರು.

ಸ್ವಾತಂತ್ರ ಪೂರ್ವದ ವಿಚಾರಗಳನ್ನು ಇಂದಿನ ಸಂದರ್ಭದಲ್ಲಿ ಜನರ ಮೇಲೆ ಹೇರಿ ಜನರ ಚಿಂತನೆಯ ದಿಕ್ಕನ್ನ ಬದಲಾಯಿಸುವ ಮೂಲಕ ಅಧಿಕಾರವನ್ನು ಹಿಡಿಯಲು ಕೆಲವು ಸಂಘಟನೆಗಳು ವ್ಯಕ್ತಿಗಳು ಮುಂದಾಗಿವೆ ಎಂದರು.

ಪುಸ್ತಕದ ಲೇಖಕ ಮಲ್ನಾಡ್ ಮೆಹಬೂಬ್ ಮಾತನಾಡಿ, ಕೆಲವು ವ್ಯಕ್ತಿಗಳು ಸಂಘಟನೆಗಳು ಮುಸ್ಲಿಮರನ್ನು ಟಾರ್ಗೆಟ್ ಮಾಡಿ ದೇಶದ ಎಲ್ಲಾ ಕೇಡುಕುಗಳಿಗೆ ಮುಸ್ಲಿಮರ ಕಾರಣ ಎಂದು ವಾದಿಸುತ್ತಾರೆ. ಈ ಮೂಲಕ ಮುಸ್ಲಿಂ ಮುಕ್ತ ಭಾರತ ಎಂಬ ವಿಷಯವನ್ನು ಆಗಾಗ ಕೆಣಕುತ್ತಾರೆ ಇಂತಹ ವಿಕೃತ ವಿಚಾರಧಾರೆ ಅಂತ್ಯವಾಗಬೇಕು ಎಂಬ ಉದ್ದೇಶದಿಂದ ಈ ಪುಸ್ತಕ ರಚಿಸಲಾಯಿತು ಎಂದು ಹೇಳಿದರು.

ಮುಸ್ಲಿಮರ ಬಗ್ಗೆ ತಪ್ಪು ಕಲ್ಪನೆ ಹೋಗಲಾಡಿಸುವ, ಜ್ಞಾನದ ಕೊರತೆಯಿಂದ ಪ್ರಶ್ನಿಸುವವರೆಗೂ ಉತ್ತರವಾಗಬೇಕು ಮತ್ತು ದ್ವಂದ್ವಗಳು ಕೊನೆಯಾಗುವ ಕಲ್ಪನೆ ಈ ಕೃತಿ ರಚನೆಯ ಮುಖ್ಯ ಉದ್ದೇಶ ವಾಗಿದೆ ಎಂದರು.

ಭಾರತದಲ್ಲಿ ಮುಸ್ಲಿಮರು ಇಲ್ಲದಂತಹ ಸಂದರ್ಭ ಇತ್ತು ಆ ಸಂದರ್ಭದಲ್ಲಿ ಎಲ್ಲವೂ ಶಾಂತಿಯಿಂದ ಇರಲಿಲ್ಲ ಎನ್ನುವುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಇಂದಿನ ಪರಿಸ್ಥಿತಿಗೆ ಹೋಲಿಸಿದರೆ ಇಂದು ನಾವು ಅತ್ಯಂತ ಶಾಂತಿಯಿಂದ ಇದ್ದೇವೆ. ಇದಕ್ಕೆ ಸರ್ವ ಧರ್ಮದ ಸೌಹಾರ್ದತೆ ಕಾರಣ ಎಂದರು.

ಭೀಮ ವಿಜಯ ಪತ್ರಿಕ ಸಂಪಾದಕ ನಾಗರಾಜು ಹೆತ್ತೂರ್ ಸ್ವಾಗತಿಸಿದರು.

ನಮ್ಮ ಹಾಸನ ಟಿವಿ ಮುಖ್ಯಸ್ಥ ತೌಫಿಕ್ ಅಹಮದ್ ಆಸೆಯ ನುಡಿ ಮಾತನಾಡಿದರು, ಪ್ರಕಾಶಕ ಮಹಮದ್ ಅಜರುದ್ದೀನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು , ಚಾಂದಿನಿ ಕಾರ್ಯಕ್ರಮ ನಿರೂಪಿಸಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248